ಇ) ಈ ಛತ್ರದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ೩.೫೦ ಲಕ್ಷ ರೂ.ಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿತ್ತು, ಆದರೆ ಅಂದಾಜು ಪಟ್ಟಿಯ ದರಗಳು ಬದಲಾವಣೆ ಆದ್ದರಿಂದ, ೧೯೮೫-೮೬ರ ಷೆಡ್ಯೂಲ್ ಆಫ್ ರೇಟ್ಸ್ ಪ್ರಕಾರ ೯.೧೨ ಲಕ್ಷ ರೂಗೆ ಪರಿಷ್ಕರಿಸಲಾಗಿದ್ದು, ಪರಿಷ್ಕೃತ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ ೩೨ ಎಂಎಲ್‌ಡಿ ೮೫, ದಿನಾಂಕ ೩-೮-೧೯೮೫ರಲ್ಲಿ ಆಡಳಿತ ಮಂಜೂರಾತಿಯನ್ನು ನೀಡಲಾಯಿತು. ಪರಿಷ್ಕರಿಸಿದ ಅಂದಾಜು ಪಟ್ಟಿಯಂತೆ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳುವ ಬಗ್ಗೆ ಟೆಂಡರ್ ಕರೆದಿದ್ದು, ಟೆಂಡರ್ ದರಗಳು ಅಂದಾಜು ಪಟ್ಟಿಗಿಂತ ಹೆಚ್ಚಾಗಿದ್ದುದರಿಂದ ಮತ್ತೊಮ್ಮೆ ಟೆಂಡರ್ ಕರೆಯಲಾಯಿತು. ಈ ಟೆಂಡರಿಗೆ ಒಬ್ಬರೇ ಕಂಟ್ರಾಕ್ಟದಾರರು ಟೆಂಡರ್ ಹಾಕಿದ್ದು ಅದು ಶೇಕಡಾ ೬೮ರಷ್ಟು ಹೆಚ್ಚಾಗಿದ್ದು ಕಂಡು ಬಂತು. ಆದ್ದರಿಂದ ಇದನ್ನು ಒಪ್ಪಲಿಲ್ಲ. ಈಗ ಉತ್ತರ ಪ್ರದೇಶದ ಸರ್ಕಾರದ ಲೋಕೋಪಯೋಗಿ ಇಲಾಖೆಯ ಮತಿಯಿಂದ ಕೆಲಸ ಮಾಡಿಸುವ ಬಗ್ಗೆ ತೀರ್ಮಾನಿಸಿ ಉತ್ತರ ಪ್ರದೇಶ ಸರ್ಕಾರದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರದ ಸಂಖ್ಯೆ ಪಿಡಬ್ಲ್ಯೂಡಿ ೨೫೯ ಬಿಎಂಡಿಎಸ್ ೮೬-೮೭,ದಿನಾಂಕ ೨೫-೬-೧೯೮೬ ರಂದು ಪತ್ರ ಬರೆಯಲಾಗಿದೆ. ಅವರಿಂದ ಉತ್ತರವನ್ನು ನಿರೀಕ್ಷಿಸಲಾಗಿದೆ.

ಈ) ಉತ್ತರ ಪ್ರದೇಶ ಸರ್ಕಾರದಿಂದ ಒಪ್ಪಿಗೆ ಪತ್ರ ಬಂದ ನಂತರ ಕೆಲಸ ಪ್ರಾರಂಭಿಸಲು ಸೂಚಿಸಲಾಗುವುದು.

ವೃದ್ಧಾಪ್ಯ ವೇತನ ಪ್ರಯೋಜನದಾರರಿಗೆ ೨-೩ ತಿಂಗಳಿಂದ ವಿತರಣೆ ಮಾಡಿರುವ ಬಗ್ಗೆ

೨೮೭. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ವೃದ್ಧಾಪ್ಯ ವೇತನ ಮಂಜೂರಾದ ಪ್ರಯೋಜನದಾರರಿಗೆ ಕಳೆದ ಎರಡು ಮೂರು ತಿಂಗಳಿಂದ ಸಿಗದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಆ) ಟ್ರೈಜರಿಯಿಂದ ಹಣ ಕಳುಹಿಸಿದ್ದರೂ ಪೋಸ್ಟ್ ಆಫೀಸುಗಳಲ್ಲಿ ಅವರು ಸಂಬಂಧಪಟ್ಟವರಿಗೆ ಪೋಸ್ಟ್ ಮೂಲಕ ಮನಿಆರ್ಡರ್ ಮಾಡಿ ವಿತರಣೆ ಮಾಡದೆ ಇರುವುದು ನಿಜವೇ?

ಇ) ಹಾಗಿದ್ದಲ್ಲಿ ಈ ನ್ಯೂನತೆಯನ್ನು ಸರಿಪಡಿಸಲು ಸರಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ಇಂತಹ ಪ್ರಕರಣಗಳು ವರದಿಯಾಗಿರುವುದಿಲ್ಲಾ

ಇ) ಉದ್ಭವಿಸುವುದಿಲ್ಲ.

ಉಪ ಮಾರುಕಟ್ಟೆ ಪ್ರಾಣಿಂಗದ ಬಗ್ಗೆ

೫೦೪. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ಉಡುಪಿ ಉಪ ಮಾರುಕಟ್ಟೆ ಪ್ರಾಂಗಣವನ್ನು ಅಕ್ಟೋಬರ್ ೧೯೮೫ರಲ್ಲಿ ಉದ್ಘಾಟಿಸಿದ್ದರೂ ವ್ಯಾಪಾರ ಪಹಿವಾಟನ್ನು ನಡೆಸದೇ ಸರ್ಕಾರದ ಬೊಕ್ಕಸಕ್ಕೆ ಅಪಾರವಾದ ನಷ್ಟವುಂಟಾಗಿರುವುದು ನಿಜ ಸಂಗತಿಯೇ ?

೨) ಹಾಗಿದ್ದಲ್ಲಿ ಇದಕ್ಕೆ ಕಾರಣವೇನು ಹಾಗೂ ನಿಯಮಿತವಾದ ವ್ಯಾಪಾರದ ಪಹಿವಾಟನ್ನು ಯಾವಾಗಿನಿಂದ ನಡೆಸಲಾಗುವುದು ?